ಫಾರಂ ನಂ.4 (ಕ್ರಿಮಿನಲ್)
ಡಿಪೋಶಿಷನ್ ಶೀಟ್ಸ್

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ

**ಸಿ.ಸಿ.ನಂ.*144/2015***

ಸಾಕ್ಷಿಯ ಹೆಸರು ಃ ಚೇತನ ಸಿಡಬ್ಲ್ಯೂ *-01*

ತಂದೆಯ ಹೆಸರು ಃ ಹುಲಿಕುಂಟಪ್ಪ ಪಿಡಬ್ಲ್ಯೂ *-02*

ವಯಸ್ಸು ಃ *29* ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸ ಸ್ಥಳ ಃ ಬಳ್ಳಾರಿ, ಸ್ವಂತ ಊರು ಭದ್ರಾವತಿ

**ದಿನಾಂಕಃ *09-02-2021* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಸಿ.ಆರ್.ಪಿ.ಸಿ ಕಲಂ. *299* ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆ**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದ ಃ**

ದಿಃ *10-11-2011* ರಂದು ನನ್ನ ಸ್ನೇಹಿತ ಮೋಹನಕುಮಾರ ರವರ ಮನೆಗೆ ಭದ್ರಾವತಿಗೆ ಬಂದು ವಾಪಾಸ್ಸು ತಿಪಟೂರಿಗೆ ಹೋಗುತ್ತಿದ್ದೆವು. ರಾತ್ರಿ *11.30* ರಲ್ಲಿ ನಾವು ನಮ್ಮ ಬೈಕನ್ನು ತರೀಕೆರೆ ದಾಟಿದ ನಂತರ ಪೆಟ್ರೋಲ್ ಬಂಕ್ ನ ಬಳಿ ನಿಲ್ಲಿಸಿ ಮೂತ್ರ ವಿಸರ್ಜನೆ ಮಾಡುತ್ತಿರುವ ಸಮಯದಲ್ಲಿ ಇನ್ನೋವಾ ಕಾರಿನಲ್ಲಿ *8-10* ಜನರು ಬಂದು ಬೆಂಗಳೂರಿಗೆ ಹೋಗುವ ರಸ್ತೆ ಎಲ್ಲಿ ಎಂದು ಕೇಳಿದ್ದಾರೆ. ನಾವು ನೇರವಾಗಿ ಹೋಗಿ ಎಂದು ಹೇಳಿರುತ್ತೇವೆ. ಅಷ್ಟರಲ್ಲಿ ಅವರು ಮಚ್ಚು, ಲಾಂಗನ್ನು ತೋರಿಸಿ ನಮ್ಮ ಕುತ್ತಿಗೆ ಬಳಿ ಇಟ್ಟು, ನಮ್ಮ ಬಳಿಯಿರುವ ಪರ್ಸ್ ಮತ್ತು ಬಂಗಾರದ ಮತ್ತು ಬೆಳ್ಳಿ ಚೈನನ್ನು ಕೊಡಲು ಹೆದರಿಸಿರುತ್ತಾರೆ. ನನ್ನ ಬಳಿಯಿದ್ದ ಮೊಬೈಲ್, ಪರ್ಸ್ ಮತ್ತು ವಾಚನ್ನು ಕಿತ್ತುಕೊಂಡಿರುತ್ತಾರೆ. ನನ್ನ ಸ್ನೇಹಿತ ಹರ್ಷಿತರವರಿಂದ ಬಂಗಾರದ ಚೈನು, ಒಂದು ಬ್ರೆಸ್ ಲೆಟ್ ಅನ್ನು, ಮೊಬೈಲ್ ಕಿತ್ತಕೊಂಡಿರುತ್ತಾರೆ. ನನ್ನ ಸ್ನೆಹಿತರಾದ ಧನಂಜಯ, ದರ್ಶನ್ ರವರಿಂದ ತಲಾ ಮೊಬೈಲ್ ಮತ್ತು ಪರ್ಸ್ ಗಳನ್ನು ಕಿತ್ತುಕೊಂಡಿರುತ್ತಾರೆ. ಅಲ್ಲದೇ ಅವರು ನಮಗೆ ಹಲ್ಲೆ ಮಾಡಿದ್ದಾರೆ. ನಂತರ ಕಾರಿನಲ್ಲಿ ವೇಗವಾಗಿ ಹೊರಟು ಹೋಗಿರುತ್ತಾರೆ. ಆ ವಿಚಾರವನ್ನು ನಾವು ನಮ್ಮ ಸ್ನೇಹಿತ ಮೋಹನ್ ರವರಿಗೆ ಹೇಳಿರುತ್ತೇವೆ. ನಂತರ ಮೋಹನ್ ರವರು ನಮ್ಮ ಬಳಿ ಬಂದರು. ನಂತರ ತರೀಕೆರೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇವೆ.

ನಂತರ ಸುಮಾರು *2* ವರ್ಷಗಳೊಳಗೆ ನಮ್ಮ ಕೆಲವು ವಸ್ತುಗಳು ಸಿಕ್ಕಿರುತ್ತದೆ. ಅನಂತರ ಆರೋಪಿತರನ್ನು ನಾನು ಠಾಣೆಯಲ್ಲಿ ನೋಡಿದ್ದೇನೆ. ಪೊಲೀಸರು ಸ್ದಳದಲ್ಲಿ ಮಹಜರು ಮಾಡಿದ್ದಾರೆ. ನಾನು ಸ್ದಳ ತೋರಿಸಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-*17* ಎಂದು ಸಾಕ್ಷಿಯ ಸಹಿಯನ್ನು ನಿಪಿ-

*17*(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರನ್ನು ಗುರುತಿಸಿದ್ದು, ಅದನ್ನು ನಿಪಿ-*18* ಎಂದು, ಸಾಕ್ಷಿಯ ಸಹಿಯನ್ನು ನಿಪಿ-*18*(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಮರುವಿಚಾರಣೆ ಇಲ್ಲ:**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)***

**ಓ ಹೇ ಕೇ ಸ ಇ ಎ ಒ**

ಸಹಿ/-

(ಎಂ.ಸಿ. ನಂಜೇಗೌಡ)
ಪ್ರಪ್ರದನ್ಯಾದಂಃ ತರೀಕೆರೆ.